ಶ್ರೀ ಜೆ.ಹೆಚ್. ಪಟೇಲ್ : ನಾನು ಮೊದಲೇ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ 5 ವಲಯಗಳು ಇವೆ. ಉತ್ತರ ಕರ್ನಾಟಕದ ಕೆಲವು ಭಾಗಗಳು ಬೇರೆ, ದಕ್ಷಿಣದಲ್ಲಿ ಬೇರೆ, ಕೋಸ್ಟಲ್ ಏರಿಯಾ ಬೇರೆ, ವೈಲ್ಡ್ ಲೈಫ್ ವಲಯ ಬೇರೆ, ಈ ರೀತಿ ರಾಜ್ಯದಲ್ಲಿ 5 ವಲಯಗಳನ್ನು ಮಾಡಿ, ಪ್ರತಿಯೊಂದು ವಲಯದಲ್ಲೂ, ಉದಾಹರಣೆಗೆ, ಹಳೇಬೀಡು, ಬೇಲೂರು, ಜೋಗ್ ಜಲಪಾತ....

ಅಧ್ಯಕ್ಷರು : ಅವರ ಪ್ರಶ್ನೆ ಏನೆಂದರೆ, ಕೆ.ಎಸ್.ಟಿ.ಡಿ.ಸಿ. ಯವರು ರನ್ ಮಾಡತಕ್ಕ ಹೋಟೆಲುಗಳಲ್ಲಿನ ಗುಣಮಟ್ಟ ಚೆನ್ನಾಗಿರುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಅವರು 6 ತಿಂಗಳಿಂದ ಹೋಗಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು : ನೀವು ಅವರನ್ನು ಕರೆದುಕೊಂಡು ಹೋಗುವಂತಹ ಏರ್ಪಾಡು ಮಾಡಿ.

ಶ್ರೀ ಜೆ.ಹೆಚ್. ಪಟೇಲ್ : ಕೆಲವು ಕಡೆ ಸುಧಾರಿಸಿವೆ. ನಮ್ಮ ಹೊಸಪೇಟೆಯಲ್ಲಿ ನಾನೇ ಕಳೆದ 2-3 ತಿಂಗಳ ಹಿಂದೆ ಹೋಗಿದ್ದೆ. ಎಷ್ಟು ಸುಧಾರಿಸಿವೆ ಎಂದು ನೋಡಿದ್ದೇವೆ. ತಾವು ಹೋಗಿ ನೋಡಿ ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ವಿದೇಶಿಯರು ಮಾತ್ರ ಆ ಹೋಟೆಲ್‌ಗಳಲ್ಲಿ ಉಳಿಯುವುದಿಲ್ಲ ಎನ್ನುವುದು ಸ್ಪಷ್ಟ. ಅದನ್ನು ನೋಡಿದರೆ ಅವರ ಜನ್ಮಜನ್ಮದಲ್ಲಿಯೂ ಅವರು ಅದರಲ್ಲಿ ಉಳಿಯುವುದಿಲ್ಲ, ಅಲ್ಲಿ ಬೀದಿ ನಾಯಿಗಳನ್ನು ಸಹ ಸಾಕುವುದಕ್ಕೆ ಆಗುವುದಿಲ್ಲ ಅಲ್ಲಿ ಅಂತಹ ಹೋಟೆಲ್‌ಗಳು.

ಅಧ್ಯಕ್ಷರು : ಸನ್ಮಾನ್ಯ ಪಟೇಲರ ನೇತೃತ್ವದಲ್ಲಿ ನಿಮ್ಮನ್ನೆಲ್ಲ ಒಳಗೊಂಡಂತೆ ಒಂದು ನಿಯೋಗವನ್ನು ಕಳುಹಿಸೋಣ. ನಂತರ ಬಂದು ತಾವು ನಮಗೆ ಹೇಳಿ.

ಶ್ರೀ ಜೆ.ಹೆಚ್. ಪಟೇಲ್ : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ನಿಯೋಗ ಎಲ್ಲಿಗೆ.

ಅಧ್ಯಕ್ಷರು : ಈ ಹೋಟೆಲ್‌ಗಳನ್ನು ನೋಡುವುದಕ್ಕೆ

ಶ್ರೀ ವಾಟಾಳ್ ನಾಗರಾಜ್ : ಈ ಹೋಟೆಲ್‌ಗಳನ್ನು ನೋಡುವುದಕ್ಕೆ ನಿಯೋಗ ಏಕೆ? ಸಿಂಗಪುರ, ಅಮೇರಿಕಾದಲ್ಲಿರುವ ಹೋಟೆಲ್‌ಗಳನ್ನು ನೋಡಲು ನಿಯೋಗ ಕಳುಹಿಸಿದರೆ ಆಗಬಹುದು ಈ ಕೆಟ್ಟ ಹೋಟೆಲ್‌ಗಳನ್ನು ನೋಡುವುದಕ್ಕೆ ತಾವು ನಿಯೋಗ ಕಳುಹಿಸುತ್ತಿದ್ದೀರಿ, ಒಳ್ಳೆಯ ಕಥೆ.

Generation of Energy in State

352- Sri S.P. Muddahanumegowda (Kunigal), Sri U.B. Banakar (Hirekerur) : Will the Deputy Chief Minister be pleased to state?

a) The quantum of power generated in the State?

b) The quantum of Power received from other States?

c) The quantum of power required to meet the demands of the consumers of the State and the steps taken in this behalf.

d) The total revenue collected from the consumers?

Sri J.H. Patel (Deputy Chief Minister) :

a) During 1994-95 the total quantum of power generated in the State is 16315 Million Units.

b) During the year 1994-95 the quantum of power received by the State towards its share from the Central Sector Generating Stations is 3395 Million Units and the quantum of power imported from Andhrapradesh is 31 Million Units.

c) During the year 1994-95 the unrestricted energy requirement of the State was of the order of 22,000 Million Units as against the total energy availability of 19741 Million Units. Thus the state had suffered energy shortages of 2259 Million Uniits.

Following steps have been taken to enhance the energy availability in order to meet the energy requirement of various categories of consumers.

i) Every effort is being putforth to get the State's share of power from the Central Sector Generating Stations to the fullest extent.

ii) KEB is proposing to add two more Nos. of Diesel Generating Units of capacity 23.4 MW each at the Diesel Generating Station, Yelahanka.

iii) Several power Projects are under various stages of execution.

iv) Government have opened the power generation to the Private Sector and encouraging its active participation in the power Generation. KEB has already entered into a power purchase agreement with M/s. Cogentrix, USA for purchase of Plant of 1000 MWs capacity at Mangalore.

d) During the year 1994-95 total revenue collected from various categories of electricity consumers is Rs. 1575.43 crores (Provisional)

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಿಂದ ಈ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಬೇಡಿಕೆ ಇದನ್ನು ನೋಡಿದರೆ ತೀವ್ರವಾಗಿರತಕ್ಕಂಥ ವಿದ್ಯುಚ್ಛಕ್ತಿ ಕೊರತೆ ರಾಜ್ಯದಲ್ಲಿ ಇರುವುದು ಕಂಡುಬರುತ್ತದೆ. ಈ ಬಗ್ಗೆ ನಾನು ಎರಡು ಕ್ಲಾರಿಫಿಕೇಶನ್ಸ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಉತ್ತರವನ್ನು ಕೊಡುವಾಗ every effort is being put forth to get the state share of power from the central generating station to the fullest extent ಎಂದು ಹೇಳಿದ್ದಾರೆ. ಅಂದರೆ ರಾಜ್ಯದಲ್ಲಿ ನಮಗೆ ಕೇಂದ್ರದಿಂದ ಬರತಕ್ಕಂಥ ವಿದ್ಯುಚ್ಛಕ್ತಿ ಸರಿಯಾದ ಪ್ರಮಾಣದಲ್ಲಿ ರಾಜ್ಯಕ್ಕೆ ಬಂದಿಲ್ಲ ಎನ್ನುವಂತಹ ಉತ್ತರ ಬಂದಿದೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಎಷ್ಟು ಪ್ರಮಾಣದ ವಿದ್ಯುತ್ ಕೇಂದ್ರದ ಜನರೇಟರ್ ಸೆಕ್ಟಾರ್‌ನಿಂದ ಬರಬೇಕಾಗಿದೆ. Several Power projects are under various stages of execution ಎಂದು ಹೇಳಿದ್ದಾರೆ. ಅಂದರೆ ಯಾವ ಯಾವ ಯೋಜನೆಗಳನ್ನು ಇವರು ವಿದ್ಯುತ್ ಉತ್ಪಾದನೆಗೋಸ್ಕರ ಕೈಗೆತ್ತಿಕೊಂಡಿದ್ದಾರೆ ಎಂದು ನಿರ್ದಿಷ್ಟವಾದ ಉತ್ತರಬೇಕು. ಮೂರನೆಯದಾಗಿ ಈಗ ಏನು ವಿದ್ಯುತ್ ಉತ್ಪಾದನೆಗೋಸ್ಕರ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆಂದು ಹೇಳುತ್ತಿದ್ದಾರೆ ಈ ಯೋಜನೆಗಳಿಂದ ನಮಗೆ ಅಗತ್ಯವಿರುವಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯ ಇದೆಯೇ? ಈ ಯೋಜನೆಗಳೆಲ್ಲಾ

ಪೂರ್ಣಗೊಂಡರೆ ನಮ್ಮ ಅಗತ್ಯ ಇರುವಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯ ಇದೆಯೇ? ವಿದ್ಯುತ್ ಅಗತ್ಯ ಇದೆ. ಏಕೆಂದರೆ ಇವತ್ತು ತೀವ್ರವಾದ ವಿದ್ಯುತ್ ಕೊರತೆ ಇದೆ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಈ ಮೂರು ಪ್ರಶ್ನೆಗಳಿಗೆ ಮಾನ್ಯ ಸಚಿವರು ದಯಮಾಡಿ ಉತ್ತರಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಅಧ್ಯಕ್ಷರೇ, ನಮ್ಮ ಬೇಡಿಕೆ ಸುಮಾರು 11 ಸಾವಿರ ಮೆಗಾವಾಟ್ಸ್. ಅಂದರೆ ಮಿಲಿಯನ್ ಯೂನಿಟ್ ಬೇರೆ ಮೆಗಾವಾಟ್ಸ್ ಬೇರೆ. ಏಕೆಂದರೆ ಕನ್‌ಫ್ಯೂಶನ್ ಆಗಬಾರದು. ಈಗ ನಮಗೆ ಒಂದು ದಿನಕ್ಕೆ 60 ಮಿಲಿಯನ್ ಅವಶ್ಯಕತೆ ಇದೆ. ನಮಗೆ ಒಂದು ವರ್ಷಕ್ಕೆ 25 ಸಾವಿರ ಮಿಲಿಯನ್ ಯೂನಿಟ್ಸ್ ಅವಶ್ಯಕತೆ ಇದೆ. ಆದರೆ ನಾವು ಉತ್ಪಾದನೆ ಮಾಡತಕ್ಕಂಥಾದ್ದು 18 ಸಾವಿರ ಮಿಲಿಯನ್ ಯೂನಿಟ್ಸ್ ಮಾತ್ರ.

ಆ 18 ಸಾವಿರ ಮಿಲಿಯನ್ ಯೂನಿಟ್ಸ್‌ನಲ್ಲಿ 3,300 ಮಿಲಿಯನ್ ಯೂನಿಟ್ಸ್, ಕೇಂದ್ರದ ಯೋಜನೆಗಳಿಂದ ಬರುತ್ತದೆ. ಅಲ್ಲಿಗೂ ನಮ್ಮದು ಸುಮಾರು 4-5 ಸಾವಿರ ಮಿಲಿಯನ್ ಯೂನಿಟ್ಸ್ ಕೊರತೆ ಇದೆ. ಆ 5 ಸಾವಿರ ಮಿಲಿಯನ್ ಯೂನಿಟ್ಸ್ ಕೊರತೆಯನ್ನು ತುಂಬಿಸುವುದಕ್ಕೆ ಈಗ ನಾವು ಏನು ಕೇಂದ್ರ ಸರ್ಕಾರವನ್ನು ಕೇಳಿದರೂ ಆಗುವುದಿಲ್ಲ, ನಾವೇ ತಯಾರೂ ಮಾಡಿದರೂ ಆಗುವುದಿಲ್ಲ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ಆದರೆ ತತಕ್ಷಣ ಉತ್ಪಾದನೆ ಮಾಡತಕ್ಕ ಇದು ಅಲ್ಲ, ಅಥವಾ ಯಾವುದೋ ದೇಶದಿಂದ ಇದನ್ನು ಆಮದು ಮಾಡಿಕೊಳಳ್ಳುವುದಕ್ಕೂ ಆಗುವುದಿಲ್ಲ, ಆದ್ದರಿಂದ ಈಗ ಇರತಕ್ಕಂಥ ಮೂರುವರೆ ಸಾವಿರ ಮೆಗಾವಾಟ್ಸ್ ಶಕ್ತಿಯನ್ನು 11 ಸಾವಿರ ಮೆಗಾವಾಟ್ಸ್ ಶಕ್ತಿಗೆ ಏರಿಸುವುದಕ್ಕೆ ಬೇರೆ ಖಾಸಗಿ ಕಂಪನಿಗಳನ್ನು, ಖಾಸಗಿ ಉದ್ದಿಮೆಗಳನ್ನು ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರ ಪರವಾನಿಗೆ ಕೊಡುತ್ತಿದೆ. ಈಗ ನಾವು ಆ ಒಂದು ಹೆಜ್ಜೆಯಲ್ಲಿ ಮುಂದೆ ಹೋಗುತ್ತಿದ್ದೇವೆ. ಕೊನೆಗೆ ನೀವು ಏನು ಕೇಳಿದ್ದಿರಿ ಅದಕ್ಕೆ ಉತ್ತರ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಸರ್ಕಾರದ ವತಿಯಿಂದ ಯಲಹಂಕದಲ್ಲಿ ಡೀಜಲ್ ಸೆಟ್ಸ್ 20 ಮೆಗಾವಾಟಿನ 6 ಯೂನಿಟ್ಸ್ ಮಾಡಿದ್ದೇವೆ. ಅದು ಕೆಲಸ ಮಾಡುತ್ತಿದೆ. ಇದರಿಂದ ನಮ್ಮ ಕೊರತೆ ಅಷ್ಟೇನೂ ಕಡಿಮೆ ಆಗುವುದಿಲ್ಲ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿನ ವಿದ್ಯುತ್ ಬಳಕೆದಾರರ ಬೇಡಿಕೆಯನ್ನು ಪೂರೈಸಲು ಸರ್ಕಾರ ಮುಂದೆ ಏನು ಕಾರ್ಯಕ್ರಮ ಹಾಕಿಕೊಂಡಿದೆ ಎನ್ನುವ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಈಗಾಗಲೇ ಅಮೇರಿಕೆಯ ಕೊಜೆಂಟ್ರಿಕ್ಸ್ ಸಂಸ್ಥೆಯೊಂದಿಗೆ ವಿದ್ಯುತ್ ಖರೀದಿಯ ಒಪ್ಪಂದ ಮಾಡಿಕೊಂಡಿದ್ದು ಅದರಂತೆ ಮಂಗಳೂರಿನಲ್ಲಿ ಉದ್ದೇಶಿತ ಒಂದು ಸಾವಿರ ಮೆಗಾವಾಟ್ಸ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಘಟಕ ಮಂಡಲಿಯು ವಿದ್ಯುತ್ ಖರೀದಿ ಮಾಡುತ್ತದೆಂದು ತಿಳಿಸಿದ್ದಾರೆ. ಈ ಕೊಜೆಂಟ್ರಿಕ್ ಕಂಪನಿಯ ಜೊತೆ ಮಾಡಿಕೊಂಡಿರುವ ಪವರ್ ಪರ್ಚೇಸ್ ಅಗ್ರಿಮೆಂಟ್‌ನ್ನು ಎಂದು ಸಾರ್ವಜನಿಕವಾಗಿ ಬಹಿರಂಗ ಮಾಡಲಾಗುವುದು. ಈ ಕೊಜೆಂಟ್ರಿಕ್ಸ್ ಸಂಸ್ಥೆ ಈ ಹಿಂದೆ ಎಷ್ಟು ವಿದ್ಯುತ್ ಸ್ಥಾವರಗಳನ್ನು ನಿರ್ಮಾಣ ಮಾಡುವಲ್ಲಿ ಏನಾದರೂ ಪ್ರಗತಿ ಸಾಧಿಸಿರುವುದನ್ನು ಸರ್ಕಾರ ನೋಡಿದೆಯೇ? ಹಾಗೂ ಪರಿಸರ ಇಲಾಖೆಯ ಒಪ್ಪಿಗೆಯನ್ನು ಏನಾದರೂ ಪಡೆದುಕೊಂಡಿದೆಯೇ? ಹಾಗೆಯೇ ಕಲ್ಲಿದ್ದಲು ಖರೀದಿ ಒಪ್ಪಂದವನ್ನು ಸಹ ಬಹಿರಂಗಗೊಳಿಸಲಾಗುತ್ತದೆಯೇ ಎಂಬುದನ್ನು ನಾನು ಕೇಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರು ಬೇರೆ ನೋಟೀಸ್ ಕೊಟ್ಟು ಬೇರೆ ಪ್ರಶ್ನೆ ಕೇಳಿದರೆ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ ಅವರು ಕೊಟ್ಟಿರುವ ಪ್ರಶ್ನೆಯ ಉತ್ತರಕ್ಕೆ ನಾನು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ದಯವಿಟ್ಟು ಉತ್ತರ ಕೊಡಿಸಿಕೊಡಿ. ಅವರು ಈಗಾಗಲೇ ಹೇಳಿದ್ದಾರೆ ಸಾವಿರ ಮೆಗಾವಾಟ್ಸ್ ಸಾಮರ್ಥ್ಯದ....

ಅಧ್ಯಕ್ಷರು : ಬಣಕಾರ್‌ರವರೇ ಇದು ಏನಾಗುತ್ತದೆ ಅಂದರೆ, ತಾವು ಕೇಳಿರತಕ್ಕಂಥ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಮುಖ್ಯ ಪ್ರಶ್ನೆಯನ್ನು ಮುಖ್ಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳಲು ಆಗುವುದಿಲ್ಲ. ಕೊಜೆಂಟ್ರಿಕ್ಸ್ ಕಂಪನಿಯ ವಿಚಾರಕ್ಕೆ ಖಚಿತವಾದ ಮಾಹಿತಿಯನ್ನು ಅಪೇಕ್ಷಿಸಿ ತಾವು ಬೇರೆ ಪ್ರಶ್ನೆಯನ್ನು ಕಳುಹಿಸಿದರೆ ಅವರು ಉತ್ತರ ಕೊಡಲಿಕ್ಕೇಬೇಕು. ತಾವು ಈ ರೀತಿ ಕೇಳಿದರೆ ಉತ್ತರ ಕೊಡಬಾರದು ಎಂದು ಅಲ್ಲ. ತಾವು ಕೇಳಿದ ತಕ್ಷಣ ಎಲ್ಲಾ ಮಾಹಿತಿಯನ್ನು ಅವರು ಹೊತ್ತುಕೊಂಡು ಬಂದಿರುವುದಿಲ್ಲ. ತಾವು ನೋಟೀಸ್ ಕೊಟ್ಟು ಇನ್ನೊಂದು ಪ್ರಶ್ನೆ ಕೊಡಿ. ಅದಕ್ಕೆ ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರು ಅದರ ಬಗ್ಗೆ ಪ್ರಸ್ತಾಪ ಮಾಡದೇ ಇದ್ದಿದ್ದರೆ ನಾವು ಅದರ ಬಗ್ಗೆ ಉಪ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ಅವರು ಕೊಜೆಂಟ್ರಿಕ್ಸ್ ಕಂಪನಿ ಬಗ್ಗೆ ಪ್ರಸ್ತಾಪ ಮಾಡಿ ಒಂದು ಸಾವಿರ ಮೆಗಾವಾಟ್ಸ್ ಮತ್ತೊಂದು ಮಾಡಲು ನಾವು ಮುಂದೆ ಹೋಗುತ್ತಿದ್ದೇವೆ ಎಂದು ಹೇಳಿ ಆ.ಎಂ.ಯು.ಓ. ಏನು ಇದೆ ಪಿ.ಪಿ.ಐ. ಏನು ಇದೆ....

ಅಧ್ಯಕ್ಷರು : ತಾವು ವಿರೋಧಪಕ್ಷದ ನಾಯಕರು ಇದ್ದೀರಿ. ವಿದ್ಯುತ್ ಕೊರತೆಯನ್ನು ನೀಗಿಸಲು ನೀವು ಹಾಕಿಕೊಂಡಿರತಕ್ಕಂಥ ಯೋಜನೆಗಳು ಏನು ಎಂದು ಕೇಳಿದ್ದಕ್ಕೆ ಇದೂ ಒಂದು ಯೋಜನೆ ಎಂದು ಅಷ್ಟೇ ಹೇಳಿದ್ದಾರೆ. ಇದು ಕೊಜೆಂಟ್ರಿಕ್ಸ್‌ನ್ನು ನಾವು ಕರೆದಿದ್ದೇವೆ ನಾವು ಒಪ್ಪಂದ ಮಾಡಿಕೊಂಡಿದ್ದೇವೆ ಅಂತ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಚಿವರು ಅದನ್ನು ಕನ್ಸಿಡರ್ ಮಾಡುತ್ತಿದ್ದೇವೆ, ನೋಡುತ್ತಿದ್ದೇವೆ ಅಂದ್ರೆ ನಮ್ಮದೇನೂ ಅಭ್ಯಂತರ ಇಲ್ಲ. ಅದರ ಬಗ್ಗೆ ವಿವರವಾದ ಚರ್ಚೆ ಬಂದಾಗ ಚರ್ಚೆ ಮಾಡೋಣ. ನೀವು ಒಪ್ಪಂದ ಮಾಡಿಕೊಂಡಿದ್ದೇವೆ ಅಂದ್ರೆ ಒಪ್ಪಂದ ಮಾಡಿಕೊಂಡಿಲ್ಲ ಅದನ್ನು ಯಾರನ್ನು ಕೇಳಿ ಮಾಡಿದಿರಿ. ನೀವು ಎಂ.ಯು.ಓ. ಇಟ್ಟಿದ್ದೀರಾ ಪಿ.ಪಿ.ಐ. ಇಟ್ಟಿದ್ದೀರಾ, ಗ್ಲೋಬಲ್ ಟೆಂಡರ್ ಕರೆದಿದ್ದೀರಾ?

ಅಧ್ಯಕ್ಷರು : ತಾವೆಲ್ಲರೂ ದಯಮಾಡಿ ಸಹಕರಿಸಬೇಕಾಗುತ್ತದೆ. ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಪ್ರಶ್ನೋತ್ತರದ ವೇಳೆ. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಗ್ರಾಹಕರ ಬೇಡಿಕೆ ಎಷ್ಟು? ಕೊರತೆ ಎಷ್ಟು? ಗ್ರಾಹಕರ ಕೊರತೆಯನ್ನು ನೀಗುವುದಕ್ಕೆ ನೀವು ಹಾಕಿಕೊಂಡಿರತಕ್ಕಂಥ ಯೋಜನೆಗಳು ಏನು ಎಂದು. ಸರ್ಕಾರದ ಮುಂದೆ ಇರತಕ್ಕಂಥ ಯೋಜನೆಗಳಲ್ಲಿ ಇದೂ ಒಂದು ಯೋಜನೆ. ಅಂದಾಜು ಉತ್ಪಾದನೆ ಇಷ್ಟು ಆಗುತ್ತದೆ ಅಂತ. ಕೊಜೆಂಟ್ರಿಕ್ಸ್‌ಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ತಾವು ಪ್ರಶ್ನೆ ಕೇಳುವುದಕ್ಕೆ ತಮಗೆ ಅವಕಾಶ ಇದೆ. ಅವರು ಉತ್ತರ ಕೊಡಲಿಕ್ಕೇ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಮುಖ್ಯಮಂತ್ರಿಗಳು ಬಹಳ ಬುದ್ಧಿವಂತರಿದ್ದಾರೆ. ಬೇರೆಯವರು ಯಾರಾದರೂ ಆಗಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆವು. ಅವರು ಅದಕ್ಕೆ ಸಂದಿಯಲ್ಲಿ ಏಕೆ ಸೇರಿಸಿದರು ಅಂದರೆ ನಾವು ಕೊಜೆಂಟ್ರಿಕ್ಸ್ ಸಂಸ್ಥೆಯೊಂದಿಗೆ ಒಂದು ಸಾವಿರ ಮೆಗಾವಾಟ್ಸ್ ಉತ್ಪಾದನೆ ಮಾಡಲು ಒಪ್ಪಂದ ಮಾಡಿಕೊಂಡಿದ್ದೇವೆ ಎಂದು ಹೇಳುವುದು ಸರಿಯಲ್ಲ ಅದರ ಬಗ್ಗೆ ನೋಡುತ್ತಿದ್ದೇವೆ, ಚರ್ಚೆ ಮಾಡುತ್ತಿದ್ದೇವೆ. ಅನೇಕ ಜನ ವಿದ್ಯುತ್ ಉತ್ಪಾದನೆ ಮಾಡಲು ಮುಂದೆ ಬಂದಿದ್ದಾರೆ, ನಾವು ಅದನ್ನೆಲ್ಲಾ ಕಂಪೇರ್ ಮಾಡಬೇಕಾಗುತ್ತದೆ. ಗ್ಲೋಬಲ್ ಟೆಂಡರ್ ಕರೆಯಬೇಕಾಗುತ್ತದೆ. ಎಲ್ಲಾ ವಿವರ ನೋಡಿದ ಮೇಲೆ ಬೇಕಾದರೆ ಬಂದು ಇಲ್ಲಿ ಮಾತನಾಡಲಿ. ಈಗ ಸದ್ಯಕ್ಕೆ ಅದನ್ನು ನೋಡುತ್ತಿದ್ದೇವೆಂದು

ಹೇಳಲಿ. ಅವರು ಏನಾದರೂ ಒಪ್ಪಂದ ಮಾಡಿಕೊಂಡಿದ್ದೇವೆ ಎಂದರೆ ಅದರ ಬಗ್ಗೆ ನೇರವಾಗಿ ಉತ್ತರ ಅವರು ಕೊಡಬೇಕಾಗುತ್ತದೆ. ಇದರ ಬಗ್ಗೆ ನಮ್ಮ ಸಂಪೂರ್ಣ ವಿರೋಧ ಇದೆ. ಕೊಚೆಂಟ್ರಿಕ್ಸ್ ಬಗ್ಗೆ ಎಂ.ಯು.ಓ ಮತ್ತು ಪಿ.ಪಿ.ಐ...

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ವಿರೋಧಪಕ್ಷದ ನಾಯಕರೇ ಹೇಳಿದ ಹಾಗೆ ಇದು ಒಪ್ಪಂದ ಆಗಿ ಫೈನಲ್ ಆಗಿಲ್ಲ. ವಿಚಾರ ಮಾಡುತ್ತಿದ್ದೇವೆ. ನಾನು ಇದನ್ನು ಉದಾಹರಣೆಯಾಗಿ ಹೇಳಿದ್ದುದು.

ಬೆಂಗಳೂರು ಡೈರಿಯ ಹಾಲಿನ ದರದ ಪರಿಷ್ಕರಣೆ

167 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ಡೈರಿಯ ಹಾಲಿನ ದರವನ್ನು ಇತ್ತೀಚೆಗೆ ಪರಿಷ್ಕರಿಸಲಾಗಿದೆಯೇ?

ಆ) ಹಾಲಿನ ದರವನ್ನು ಏರಿಸಲು ಇದ್ದಂತಹ ಕಾರಣಗಳೇನು?

ಇ) ಹಾಲಿನ ದರವನ್ನು ಪರಿಷ್ಕರಿಸುವುದಕ್ಕಾಗಿ ಒಂದು ಸಮಿತಿಯನ್ನು ಸರ್ಕಾರದವರು ರಚಿಸಿದ್ದರೆ;

ಹಾಗಿದ್ದಲ್ಲಿ ಆ ಸಮಿತಿಯು ಮಾಡಿದ ಶಿಫಾರಸ್ಸುಗಳೇನು;

ಈ) ಈ ಹಾಲಿನ ದರವನ್ನು ಏರಿಸಿರುವ ಬಗ್ಗೆ ಬೆಂಗಳೂರು ನಗರದಲ್ಲಿ ಜನತೆಯ ಪ್ರತಿಭಟನೆ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಹಾಗಿದ್ದಲ್ಲಿ ಏರಿಸಿರುವ ಹಾಲಿನ ದರವನ್ನು ಕಡಿಮೆ ಮಾಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು.

ದಿನಾಂಕ: 1-6-1995 ರಿಂದ ಗ್ರಾಹಕರಿಗೆ ಪ್ರತಿ ಲೀಟರ್‌ಗೆ ರೂ. 8-50 ರಂತೆ.

ಆ) 1) ವಿದ್ಯುಚ್ಛಕ್ತಿ, ಇಂಧನ, ಪ್ಯಾಕಿಂಗ್ ಸಾಗಾಣಿಕೆ ವೆಚ್ಚ, ಪಶು ಆಹಾರ ಮತ್ತು ಇತರೇ ಅಗತ್ಯ ವಸ್ತುಗಳ ಹಾಗೂ ಹಾಲು ಸಂಸ್ಕರಣೆ ವೆಚ್ಚದಲ್ಲಿ ಗಣನೀಯ ಹೆಚ್ಚಳ.

2) ಹಾಲು ಉತ್ಪಾದನಾ ವೆಚ್ಚದ ಹೆಚ್ಚಳದಿಂದಾಗಿ ಹಾಲು ಉತ್ಪಾದನೆ ಮತ್ತು ಶೇಖರಣೆ ಇಳಿಮುಖವಾಗುತ್ತಿದ್ದುದರಿಂದ ಹಾಲು ಉತ್ಪಾದಕರಿಗೆ ಪ್ರೋತ್ಸಾಹದಾಯಕ ಬೆಲೆ ನೀಡಲು.

ಇ) ಹೌದು.

1) ಶೇಕಡ 3.5 ಜಿಡ್ಡು ಮತ್ತು ಶೇಕಡ 8.5 ಜಿಡ್ಡೇತರ ಘನ ಪದಾರ್ಥವುಳ್ಳ ಪ್ರತಿ ಲೀಟರ್ ಹಾಲು ಶೇಖರಣೆಗೆ ರೂ. 6.50 ದರ ನೀಡುವುದು.

2) ಶೇಕಡ 3.0 ಜಿಡ್ಡು ಮತ್ತು ಶೇಕಡ 8.5 ಜಿಡ್ಡೇತರ ಘನ ಪದಾರ್ಥವುಳ್ಳ ಹಾಲು ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ. 8.50 ನಿಗಧಿಪಡಿಸುವುದು.

ಈ) ಹೌದು

ಅಗತ್ಯ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳಕ್ಕನುಗುಣವಾಗಿ ದರವನ್ನು ಪರಿಷ್ಕರಿಸಿರುವುದರಿಂದ ದರ ಇಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಹಾಲಿನ ಬೆಲೆ ಏರಿಕೆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ದಿನಾಂಕ 1-6-95 ರಿಂದ